ಉ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯನ್ನು ಇನ್ನೂ ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಒಪ್ಪಂದದ ಪ್ರಕಾರ ದಿನಾಂಕ: 31/3/2009ರೊಳಗೆ ಒಟ್ಟು 150 ಆಂಬುಲೆನ್ಸ್ ಸೇವೆಗಳನ್ನು ನೀಡಬೇಕಾಗಿದ್ದು, ದಿನಾಂಕ: 17/2/2009 ರಂದೇ ಸದರಿ ಗುರಿಯನ್ನು ಸಾಧಿಸಲಾಗಿದೆ. ಮಾರ್ಚ್ 2010ರ ವೇಳೆಗೆ ಉಳಿದ 367 ಆಂಬುಲೆನ್ಸ್‌ಗಳ ಸೇವೆಗಳನ್ನು ರಾಜ್ಯದ್ಯಂತ ಒದಗಿಸಲಾಗುವುದು. ತಾಯಿ ಭಾಗ್ಯ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಆಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಈ ಯೋಜನೆಯಡಿಯಲ್ಲಿ ಖಾಸಾಗಿ ಆಸ್ಪತ್ರೆಗಳೊಂದಿಗೆ ಕರಾರು ಈ ಕೆಳಕಂಡಂತೆ ಮಾಡಿಕೊಳ್ಳಲಾಗಿದೆ.

ಕ್ರ.ಸಂ.	ಜಿಲ್ಲೆ	ಒಟ್ಟು ಅರ್ಜಿಗಳು			
		ಸರ್ಕಾರಿ	ಸಹಿ	ಖಾಸಗಿ	ಸಹಿ
1	ಬೀದರ್	6	–	3	3
2	ಗುಲ್ಬರ್ಗಾ	2	2	6	6
3	ರಾಯಚೂರು	5	4	5	2
4	ಕೊಪ್ಪಳ	3	1	1	1
5	ಬಿಜಾಪುರ	2	2	14	14
6	ಬಾಗಲಕೋಟೆ	6	6	30	29
7	ಚಾಮರಾಜನಗರ	4	3	1	–

ಸಂಖ್ಯೆ: ಆಕುಕ 13 ಎಸ್ಬಿಕ್ಯೂ 2009

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

377 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)

ಪ್ರೊ.ಡಾ: ಮುಮ್ತಾಜ್ ಅಲಿ ಖಾನ್ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ 2006–07, 2007–08ನೇ 2008–09ನೇ ಸಾಲಿನಲ್ಲಿ ವಕ್ಫ್ ಮಂಡಳಿಯ ವತಿಯಿಂದ ಮುಸ್ಲಿಮರಿಗಾಗಿ ಮಸೀದಿ, ರುದ್ರಭೂಮಿ ಮತ್ತು ಜಮೀನಿನ ಖರೀದಿಗೆ ಬಿಡುಗಡೆ ಮಾಡಲ್ಪಟ್ಟ ಅನುದಾನವೆಷ್ಟು (ವಿವರವಾರು ಒದಗಿಸುವುದು);

ಈ ಉದ್ದೇಶಕ್ಕಾಗಿ ವಕ್ಫ್ ಬೋರ್ಡಿನಲ್ಲಿ ಯಾವುದೇ ರೀತಿಯ ಯೋಜನೆ ಇರುವುದಿಲ್ಲ.

ಆ) 2008–09ನೇ ಸಾಲಿನಲ್ಲಿ ರಾಜ್ಯದಿಂದ ಹಜ್ ಯಾತ್ರೆಗೆ ಕೈಗೊಂಡ ಭಕ್ತಾಧಿಗಳ ಸಂಖ್ಯೆ ಎಷ್ಟು ಹಾಗೂ ಈ ಯಾತ್ರೆಯನ್ನು ಕೈಗೊಳ್ಳಲು ಇರುವ ನಿಯಮಗಳೇನು?

2008–09ನೇ ಸಾಲಿನಲ್ಲಿ ರಾಜ್ಯದಿಂದ 6654 ಯಾತ್ರಿಕರು ಹಜ್ ಯಾತ್ರೆಯನ್ನು ಕೈಗೊಂಡಿರುತ್ತಾರೆ. ಹಜ್ ಸಮಿತಿ ಕಾಯ್ದೆ 2002ರ ಅಡಿಯಲ್ಲಿ 2008–09ನೇ ಸಾಲಿನಲ್ಲಿ ಕೇಂದ್ರೀಯ ಹಜ್ ಸಮಿತಿಯು ಹೊರಡಿಸಿರುವ ಮಾರ್ಗಸೂಚಿ ಅನ್ವಯ ಹಜ್ ಯಾತ್ರಾರ್ಥಿಗಳಿಗೆ ಕಳುಹಿಸಿಕೊಡಲಾಗಿದೆ.

ಸಂಖ್ಯೆ: ಎಂಡಬ್ಲ್ಯೂಡಿ 91 ಡಬ್ಲ್ಯೂಇಎಸ್ 2009

(ಪ್ರೊ.ಡಾ: ಮುಮ್ತಾಜ್ ಅಲಿ ಖಾನ್)
ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

379 ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್.

ವೈದ್ಯಕೀಯ ಶಿಕ್ಷಣ ಸಚಿವರು

ಅ) 2008–09ನೇ ಸಾಲಿನಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ವೈದ್ಯಕೀಯ ಮಹಾವಿದ್ಯಾಲಯವನ್ನು ತೆರೆಯಲಾಗುವುದು (ವಿವರ ನೀಡುವುದು);

ಯಾವ ಜಿಲ್ಲೆಯಲ್ಲೂ ಹೊಸದಾಗಿ ಸರ್ಕಾರ ವೈದ್ಯಕೀಯ ಕಾಲೇಜನ್ನು ತೆರೆಯಲಾಗುತ್ತಿಲ್ಲ.

ಆ) ಹೊಸದಾಗಿ ರಚನೆಯಾದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರವು ರೂಪುರೇಷೆಗಳನ್ನು ರೂಪಿಸಿದೆಯೇ;

ಇಲ್ಲ.